179 (2)

Regd. B.G. No. 155

— ಶ್ರೀ —

6—9—1962

Sri "SATYAVADI"
— DAILY —
MYSORE 4

47 th Year
47 ನೇ ವರ್ಷ

ಸತ್ಯವಾದಿ

ಸ್ಥಾಪಕರು— ಅರಮನೆ ಸಿರಸ್ತೇದಾರ್ ಎಂ. ಎ. ಸುಬ್ಬರಾಯರು   2 ನ ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಯನ್ನು ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

**Protect the cow**
**ಗೋಸಂರಕ್ಷಣೆ ಮಾಡಿ**

## ವಿದೇಶ ಪ್ರವಾಸಕ್ಕೆ ಅರ್ಜಿಗಳು

ನವದೆಹಲಿ 4— ವಿದೇಶಗಳಿಗೆ ಪ್ರವಾಸ ಹೋಗುವ ಸಂಬಂಧದಲ್ಲಿ ಜೂನ್ 8 ರಿಂದ ಜುಲೈ 31 ರ ಅವಧಿಯಲ್ಲಿ ಅನುಮತಿ ಬೇಡಿ ಬಂದ 734 ಅರ್ಜಿಗಳನ್ನು ರಿಸರ್ವ್ ಬ್ಯಾಂಕಿನವರು ನಿರಾಕರಿಸಿದ್ದಾರೆ ಎಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು — ಕ್ಯಾಲಿಫೋರ್ನಿಯಾದ ಲಾಂಗ್ ಬೀಚಿನಲ್ಲಿ ನಡೆದ ಅಂತರ ರಾಷ್ಟ್ರೀಯ ಸೌಂದರ್ಯ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕೆ ಅಮೇರಿಕಾಕ್ಕೆ ತೆರಳಲು ಯಾರಿಗಾದರೂ ವಿದೇಶೀಯ ವಿನಿಮಯವನ್ನು ಮಂಜೂರು ಮಾಡಲಾಗಿದೆಯೇ ಎಂಬ ಪ್ರಶ್ನೆಗೆ, ಸಮ್ಮೇಳನದ ವ್ಯವಸ್ಥಾಪಕರು ಎಲ್ಲ ವೆಚ್ಚಗಳನ್ನೂ ವಹಿಸಿಕೊಂಡಿದ್ದಾರಾದ್ದರಿಂದ ಶ್ರೀಮತಿ ಶೈಲ ಜೋಂಕರವರಿಗೆ ಪ್ರವಾಸ ಸಂಬಂದದ ಅನುಮತಿ ನೀಡಲಾಯಿತು ಎಂದು ತಿಳಿಸಲಾಯಿತು.

○ ○

## ಕಲ್ಲಿದ್ದಲಿನ ಸಾಗಾಣಿಕೆ

ಪ್ರಸಕ್ತ ವರ್ಷದ ಮೇ ಜೂನ್ ಹಾಗೂ ಜುಲೈ ತಿಂಗಳುಗಳಲ್ಲಿ ಕರಾವಳಿಯ ಬಂದರುಗಳಿಗೆ ಕಲ್ಕತ್ತಾದಿಂದ ಹಡಗುಗಳ ಮೂಲಕ ಸುಮಾರು 4-5 ಲಕ್ಷ ಟನ್ ಕಲ್ಲಿದ್ದಲಿನ ಸಾಗಾಣಿಕೆ ಮಾಡಲಾಯಿತು.

○ ○

## ಆಮದಿನ ಮೇಲೆ ನಿರ್ಬಂಧ

ಕಲ್ಲಿದ್ದಲಿನ - ಟಾರ್‌ನಿಂದ ತಯಾರಿಸಲಾಗುವ ವರ್ಣ ವಸ್ತುಗಳ ಆಮದನ್ನು ಅಕ್ಟೋಬರು 1 ರಿಂದ ಬಹಿಷ್ಕರಿಸಬೇಕೆಂದು ಭಾರತ ಸರ್ಕಾರವು ನಿರ್ಧರಿಸಿದೆ ಎಂದು ದೆಹಲಿ ವಾರ್ತೆ ತಿಳಿಸುತ್ತದೆ.

○ ○

## ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ [illegible]
ಸಂಪತ್ಕೃಷ್ಣ ಜೋಯಿಸರಿಂದ
7 ಶುಕ್ರವಾರ ಅಷ್ಟಮಿ ಜ್ಯೇಷ್ಠ

# ಪದಾರ್ಥಗಳ ದರ ಇಳಿಕೆಗೆ ದೆಹಲಿಯಲ್ಲಿ ಚರ್ಚೆ

ನವ ದೆಹಲಿ 5 — ದರಗಳ ಪರಿಸ್ಥಿತಿ ಹಾಗೂ ಅವುಗಳನ್ನು ಹತೋಟಿಯಲ್ಲಿಡುವ ಕ್ರಮ ಇವುಗಳನ್ನು ಅತ್ಯಂತ ಉನ್ನತ ಮಟ್ಟದಲ್ಲಿ ಕೇಂದ್ರ ಸರ್ಕಾರ ಚರ್ಚಿಸಿತೆಂದು ಗೊತ್ತಾಗಿದೆ ಕೆಲವು ಸಮಸ್ಯೆಗಳನ್ನು ಇನ್ನೂ ಅಭ್ಯಸಿಸಬೇಕಾದ ಕಾರಣ ಚರ್ಚೆಯಲ್ಲಿ ತೀರ್ಮಾನ ಯಾವುದೂ ಆಗಲಿಲ್ಲ.

## ಮದುವೆಯಿಂದ ಪ್ರಯೋಜನ

ಪ್ರಪಂಚ ಸಂಸ್ಥೆಯ 1961 ವಿಷಯಗಳ ತಪ್ಸೀಲಿನಲ್ಲಿ ವಿಶ್ವದಾದ್ಯಂತ ಮದುವೆಯಾಗಿರುವವರು, ಒಂಟಿ ಅಥವಾ ವೈಧವ್ಯ ಅಥವಾ ವಿವಾಹವಿಚ್ಛೇದನೆ ಹೊಂದಿರುವವರಿಗಿಂತ ಹೆಚ್ಚು ಕಾಲ ಜೀವಿಸುವರೆಂದು ಪ್ರಕಟವಾಗಿದೆ. ಆರೋಗ್ಯದ ಮೇಲೆ ವಿವಾಹವು ಒಳ್ಳೇ ಪರಿಣಾಮಕಾರಿ ಎಂದೂ ಹೇಳಲಾಗಿದೆ.

## ಚಿನ್ನದ ಬಗ್ಗೆ ಕಾನೂನು

ನವ ದೆಹಲಿ 5 — ಚಿನ್ನ ಮತ್ತು ಬೆಳ್ಳಿಗೆ ಸಂಬಂಧಿಸಿದಂತೆ ಭಾರತ ಸಂರಕ್ಷಣ ಕಾನೂನು ಮಾಡಲು ಸರ್ಕಾರಕ್ಕೆ ಈ ದಿನ ಲೋಕಸಭೆ ಅನುಮತಿ ಇತ್ತಿತು. ನಾರ್ ಫೆಂಸ್ ಕಾನೂನಿಗೆ ತಿದ್ದುಪಡಿ ಮಾಡುವ ಮಸೂದೆಯನ್ನು ಕೈಗಾರಿಕೆ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನ ಮಂಡಿಸಿದರು.

## ಬೆಂಕಿ ಅನಾಹುತ

ಮದರಾಸು [illegible] ಬೀದಿಯ ಒಂದು ಕಟ್ಟಡದ ಮಹಡಿ ಮೇಲಿದ್ದ ಚಪ್ಪರವು [illegible] ಹೋಯಿತು : ಹುಡುಗರು ಉರಿಯುತ್ತಿದ್ದ ಪಟ್ಟ [illegible] ಆಕಸ್ಮಿಕವಾಗಿ [illegible] ತು : [illegible] ಗಳು ಅಗ್ನಿಯನ್ನು ಆರಿಸಿದವು

## ಮುಖ್ಯ ಮಂತ್ರಿಗಳ ಭರವಸೆ

ಚಿತ್ರದುರ್ಗ 5— ಮೈಸೂರು-ಮಹಾರಾಷ್ಟ್ರ ಗಡಿ ವಿವಾದದಲ್ಲಿ ಮತ್ತು ಕೃಷ್ಣಾ - ಗೋದಾವರಿ ನೀರಿನ ವ್ಯಾಜ್ಯದಲ್ಲಿ ರಾಜ್ಯದ ಹಿತವು ನಷ್ಟಗೊಳ್ಳದಂತೆ ತಾವು ನೋಡಿಕೊಳ್ಳುವುದಾಗಿ ಮೈಸೂರು ಪ್ರದೇಶ ಕಾಂಗ್ರೆಸ್ಸು ಕಮಿಟಿಯಲ್ಲಿ ಶ್ರೀ ನಿಜಲಿಂಗಪ್ಪನವರು ಹೇಳಿದರು .... ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರ ಅಶಿಸ್ತು ಕುರಿತು ಕಾಂಗ್ರೆಸ್ಸು ಆಫೀಸಿಗೆ 500 ದೂರುಗಳು ಬಂದಿರುವುದೆಂದೂ ತಿಳಿಸಿ, ಕಾಂಗ್ರೆಸ್ಸಿನಲ್ಲಿ ಅಶಿಸ್ತು ಸಹಿಸಲಾಗದೆಂದರು

## ಮರಣ

ಚಿತ್ರದುರ್ಗ 5— ಮಾಲಪ್ರಭಾ ಪಿ ಡಬ್ಲ್ಯು ಡಿ ಗೆ ಸೇರಿದ ಒಂದು ವ್ಯಾನು ಇಲ್ಲಿಗೆ ಮೂರು ಮೈಲಿ ದೂರ ಸಿದ್ದೋರ ಹತ್ತಿರ ತಲೆಕೆಳಗಾಗಿ ಒಂದು ಹಳ್ಳಕ್ಕೆ ಬಿದ್ದು ಡ್ರೈವರು ಕೂಡಲೇ ಸತ್ತು ಹೋದ ; ಅದಲ್ಲದೆ ಇತರ ನಾಲ್ಕು ಮಂದಿ ಸ್ವಲ್ಪ ಗಾಯಗೊಂಡರು

## ಸಸ್ಪೆಂಡ್

ನವ ದೆಹಲಿ 5 — ಸೋಷಲಿಸ್ಟ ಸದಸ್ಯ ಶ್ರೀ ಬಿ ಎನ್ ಮಂಡಲ್‌ರವರನ್ನು ಲೋಕಸಭೆಯಿಂದ ಒಂದು ವಾರ ಸಸ್ಪೆಂಡು ಮಾಡಿದೆ. ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಮಾಡಿದರೆಂದು ಈ ಕ್ರಮ.

[illegible] ಭಾವೈಕ್ಯ ಸಮಿತಿಯು ಉಪಾಧ್ಯಾಯರ ನಡವಳಿಕೆ ಬಗ್ಗೆ ರಚಿಸಿದ ನಿಯಮಗಳನ್ನು ಡೆಲ್ಲಿ ವಿಶ್ವವಿದ್ಯಾಲಯದ ಉಪಾಧ್ಯಾಯ ಸಂಘ ನಿರಾಕರಿಸಿದೆ.

## ಶಾಂತ ಪರಿಸ್ಥಿತಿ

ಕಲ್ಕತ್ತಾ ಪ್ರ ಮೂರು ದಿವಸಗಳ ಭೀಕರ ಗಲಭೆ ನಂತರ ಶಾಂತ ಪರಿಸ್ಥಿತಿಗೆ ಬಂದಿದೆ — ಸೀಲ್ಡಾ ಸ್ಟೇಷನ್ನಿನಲ್ಲಿ ಟಿಕೇಟು ಚಕ್ ಮಾಡಿದಾಗ ಹಿಡಿಯಲ್ಪಟ್ಟವನು ವಿದ್ಯಾರ್ಥಿಯಲ್ಲವೆಂದು ಸರ್ಕಾರಿ ಪ್ರೆಸ್ ನೋಟಿನಲ್ಲಿ ತಿಳಿಸಲಾಗಿದೆ — ಪೋಲೀಸರ ಮಿತಿಮೀರಿದ ಕಾರ್ಯ ವೆಂದು ಪ್ರತಿಭಟಿಸಿ, ವಿದ್ಯಾರ್ಥಿಗಳು ಸ್ಕೂಲು ಕಾಲೇಜುಗಳಿಗೆ ನಿನ್ನೆ ಹೋಗಲಿಲ್ಲ ; ಬಂಧಿಸಲ್ಪಟ್ಟಿರುವವರನ್ನೆಲ್ಲಾ ಬಿಡಬೇಕೆಂದು ಒತ್ತಾಯ ಮಾಡಿದರು.

⁂

ನವ ದೆಹಲಿ 5 — ಚೀನಾ—ಭಾರತದ ಗಡಿ ಮಾತುಕತೆಯನ್ನು ಕುರಿತು ಮಾತುಕತೆಗಾಗಿ ಚೀನಾ ಯಾವಾಗಲೂ ತಮ್ಮನ್ನು ಆಹ್ವಾನಿಸಿಲ್ಲವೆಂದು ಪಂ|| ನೆಹರು ಈ ದಿನ ಲೋಕಸಭೆಯಲ್ಲಿ ತಿಳಿಸಿದರು

×

ವಾಷಿಂಗ್ಟನ್ 5 — ಜಪಾನಿಗೆ ಉತ್ತರದಲ್ಲಿ ರಷ್ಯದ ಮೇಲೆ ಅಮೇರಿಕ-ಯು-2 ವಿಮಾನ ಕಳಿಸಿತೆಂದು ರಷ್ಯ ಆರೋಪಿಸಿದೆ. ಅಮೇರಿಕ ಉತ್ತರವನ್ನಿತ್ತು ಯಾವ ಇಚ್ಛೆಯೂ ಇಲ್ಲದೆ ಗಡಿ ಭಂಗ ಆಗಿದೆ ಎಂದು ಹೇಳಿದೆ

★

ಚಿತ್ರದುರ್ಗ 5 — ಮೈಸೂರು ಪ್ರದೇಶ ಕಾಂಗ್ರೆಸ್‌ನ ಹಂಗಾಮಿ ಅಧ್ಯಕ್ಷರಾಗಿ ಶ್ರೀ ಮಹಮದ್ ಅಲಿ ನೆಹ್ತಾಬ್ ಅಲಿ ಆಯ್ಕೆ ಆದರು.

★

ಕೋಲಾರ 5— ಪಾಲಾರ ನದಿ ಪ್ರವಾಹಗೊಂಡು ಅದರ ದಡದಲ್ಲಿನ ಭಾರಿ ಕೆರೆಗಳಲ್ಲಿ ಒಂದಾದ ಬೆತಮಂಗಲ ಕೆರೆ ತುಂಬಿ ಕೋಡಿಬಿದ್ದಿದೆ.

★

ಜಕಾರ್ತಾ 5— ನಾಲ್ಕನೇ ಏಷ್ಯಾ ಕ್ರೀಡೆಗಳು ಮಂಗಳವಾರ ಮುಕ್ತಾಯಗೊಂಡವು

## ವಿರೋಧ ನಿರ್ಧಾರ

ಬೆಂಗಳೂರು 2— ಮೈಸೂರು ಸರಕಾರದ ಹೊಸ ಮಾರಾಟ ತೆರಿಗೆ ಯೋಜನೆಯನ್ನು 'ಚೇಂಬರ್ ಆಫ್ ಕಾಮರ್ಸ್' ಟೀಕಿಸಿದೆ

## ಚುಚ್ಚುಮದ್ದು ಖಡ್ಡಾಯ

ನವದೆಹಲಿ 4— ದೇಶದಲ್ಲಿ ಸಿಡುಬು ರೋಗ ನಿವಾರಣೆಗಾಗಿ ಚುಚ್ಚುಮದ್ದು (ವ್ಯಾಕ್ಸಿನೇಷನ್) ಹಾಕುವುದನ್ನು ಕಡ್ಡಾಯಗೊಳಿಸುವ ಬಗ್ಗೆ ಕೇಂದ್ರವು ಶಾಸನವೊಂದನ್ನು ರಚಿಸಬೇಕೆಂದು ರಾಷ್ಟ್ರೀಯ ಸಿಡುಬು ರೋಗ ನಿರ್ಮೂಲನಾ ಕಾರ್ಯಕ್ರಮ ಸಮಿತಿ ಶಿಫಾರಸುಮಾಡಿದೆ.

## ಭಿಕ್ಷುಕರಿಗೆ ಶಿಕ್ಷಣ

ಭಿಕ್ಷುಕರಿಗೆ ವೃತ್ತಿ ಶಿಕ್ಷಣ ಕೊಡುವ 'ಸರ್ಟಿಫೈ' ಆದ ಸಂಸ್ಥೆಯೊಂದು ದೆಹಲಿಯಲ್ಲಿ ಕೆಲಸ ಮಾಡುತ್ತಿದೆ; ಈಗ 155 ಜನ ಭಿಕ್ಷುಕರು ಈ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

○ ○

## ದಿವ್ಯ ವಾಣಿ

ಈ ಮನೆ ನನ್ನ ಮನೆಯಲ್ಲ, ಇದು ದೇವರದು: ದುಃಖಿಗಳೂ ನಿರಾಶ್ರಿತರೂ ಯಾವಾಗ ಬೇಕಾದರೂ ಇಲ್ಲಿಗೆ ಬರಬಹುದು: ನಾನು ಇದರ ಕಾವಲುಗಾರ, ಆಗಂತುಕನಾಗಿ ಬಂದವರೇ ಈ ಮನೆಯವರು. — ವಿಕ್ಟರ್ ಹ್ಯೂಗೋ.

○ ○

ತಮ್ಮ ಪ್ರಯೋಜನವನ್ನು ಬಿಟ್ಟು ಪರರ ಸುಖಕ್ಕಾಗಿ ಕಷ್ಟಪಡುವವರು ಉತ್ತಮರು; ತಮ್ಮ ಪ್ರಯೋಜನಕ್ಕೆ ಕುಂದು ಬಾರದಂತೆ ಪರರ ಕೆಲಸವನ್ನು ಮಾಡುವವರು ಮಧ್ಯಮರು: ತಮ್ಮ ಪ್ರಯೋಜನಕ್ಕೋಸ್ಕರ ಇತರರಿಗೆ ಕೇಡುಂಟು ಮಾಡುವವರು ಅಧಮಾಧಮರು

— ನೀತಿವಾಕ್ಯ ಮಂಜರಿ.

## ಜೇನು ಹನಿಗಳು

### ಸತ್ಯವೆಲ್ಲಿ?

ಮುಖಂಡರೆನಿಸುವವರೆಲ್ಲರು ಹೇಳುವ |
ಮಾತನು ಕೇಳುತ ನಿತ್ಯ ||
ಅಖಂಡ ರಾಜಕೀಯದಿ ಮುಳುಗಿ |
ನೋಡಲು, ದೂರದಿ ಇದೆ, ಸತ್ಯ |

### ಸರಕಾರೀ ಔಷಧ

ತಲೆ ಶೂಲೆ, ಎದೆ ನೋವು, ಹೊಟ್ಟೆಯುರಿ/
ಎಲ್ಲದಕು ಮದ್ದೊಂದೇ ಕೆಂಪು ನೀರು |
ಊರಲಾಸ್ಪತ್ರೆಗಳ ಒಳಗೂ ಹೊರಗೂ ಇರುವ |
ರೋಗಿಗಳಿಗಿದುವೆ ತಂಪು ಖೀರು |

### ಎರಡೂ ಬೇಕು

ಶಾಂತಿಗಾಗಿ ಸಮರ ಬೇಕು. |
ಎನುವ ಮಂದಿಯಿಹರು |
ಸಮರವಿರಲೆ ಶಾಂತಿ ಬರದು |
ಎನುವವರೂ ಇರುವರು |

### ಹಳೆಯ - ಹೊಸ ಸಿದ್ಧಾಂತ

ಉಳುವವನೇ ಹೊಲದೊಡೆಯ |
ಇದು ಸೋಷಲಿಸ್ಟ್ ಸಿದ್ಧಾಂತ |
ಬಾಳುವವನೇ ಅರಸ |
ಇದು ಹಳೆಯ ರಾದ್ಧಾಂತ |

### ಹೊಸ ರೂಢಿ

ಬದುಕಿರಲು ಕಡೆಗಣಿಸಿದವನನೂ |
ಸತ್ತ ಮೇಲ್ ಹೊಗಳುವುದು ರೂಢಿ |
ರಷ್ಯದಲೋ? ಸತ್ತ ಸ್ಟ್ಯಾಲಿನನಸ್ಥಿ ಪಂಜರಕು |
ಹಾಕುತಿಹರೀಗ ಛೀಗಳೆದು ಬೇಡಿ |

### ಬುದ್ಧಿಯ ಬಲ

ರಾವಣಗೆ ತಲೆ ಹತ್ತು |
ಕೈಗಳೋ ಇಪ್ಪತ್ತು |
ಕಾರ್ತವೀರ್ಯಾರ್ಜುನಗೆ |
ತಲೆಯೊಂದೇ ಕೈಮಾತ್ರ ಸಾವಿರ |

## ವುಡ್‌ಲ್ಯಾಂಡ್ಸ್ 31-8-62 ರಿಂದ

ಅಮೋಘ ಆರಂಭ

## ನಯಿ ಮಾ (ಹಿಂದಿ) NAI MAA

ಪಾತ್ರ— ಬಾಲರಾಜ್ ಸಹಾನಿ, ಶ್ಯಾಮ, ಡೈಸಿ ಇರಾನಿ, ಪೀಸ್ ಕನಿವಾಲ್

ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಸಾಂಸಾರಿಕ ಚಿತ್ರ

ದಿನವಹಿ 3 ಪ್ರದರ್ಶನಗಳು

## ಆಪೆರಾ— 6-9-62 ರಿಂದ

## Flight to Assam ✻ ಫ್ಲೈಟ್ ಟು ಅಸ್ಸಾಂ

ನಟವರ್ಗ— ರಂಜನ್, ಶಶಿಕಲಾ, ಟುನ್ ಟುನ್, ಸುಜಾತಾ, ಮದನಪುರಿ

ಸಾಹಸಮಯ, ರೋಮಾಂಚಕ, ವಿಮಾನಗಳ ಹಾರಾಟಗಳಿಂದ ಕೂಡಿದ ಚಿತ್ರ

ದಿನ 3 ಆಟಗಳು



ಅಮೇರಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

## Help The 'Gorakshana'

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಭಾಗಗಳಿಂದ ಕೂಡಿದ
ಏಕೈಕ ಕನ್ನಡ ಪತ್ರಿಕೆ.

ಪತ್ರಿಕೆ ಉಚಿತ; ಅಂಚೆ ವೆಚ್ಚಕ್ಕಾಗಿ ವರ್ಷಕ್ಕೆ 30 ನಯೆ ಪೈಸೆ

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ - ಗೋರಕ್ಷಣ ಆಫೀಸ್, ಚಾಮರಾಜಪುರಂ ಮೈಸೂರು 4

Edited, Printed & Published by the Proprietor,
Dharma Prachara Nirata M. S. Krishna Rao, at the
Satyavadi Press, Chamarajapuram, Mysore. 4